**<u>ದಿನಾಂಕ: 13.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:</u>**

**<u>ಪಾಟೀ ಸವಾಲು: 2 ನೇ ಎದುರುದಾರರ /ವಿಮಾ ಸಂಸ್ಥೆ ಪರ ವಕೀಲರಾದ ಶ್ರೀಮತಿ ಎಸ್.ಎಲ್.ಎನ್. ರವರಿಂದ:</u>**

1. ಅಪಘಾತವು ಆದಂತಹ ಸಮಯದಲ್ಲಿ ನಾನು ಲಕ್ಕಸಂದ್ರ ಕಡೆಯಿಂದ ಚೀಲೂರು ಕಡೆಗೆ ನಡೆದುಕೊಂಡು ಹೋಗುತ್ತಾ ಇದ್ದೆನು. ನಾನು ಆ ದಿನ ನನ್ನ ಸ್ವಂತ ಊರಾದ ಅರ್ಥಬೆಲೆ ಗ್ರಾಮದ ಕಡೆಗೆ ಹೋಗುತ್ತಾ ಇದ್ದೆನು.

2. KA-42-E-7948 ಸಂಖ್ಯೆಯ ದ್ವಿಚಕ್ರ ವಾಹನವು ನನಗೆ ಅಪಘಾತವನ್ನು ಮಾಡಿದೆ. ಆ ದಿನ ನಾನು ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಾ ಇದ್ದೆನು. ನಾನು ಆ ರೀತಿ ನಡೆದುಕೊಂಡು ಹೋಗುತ್ತಾ ಇದ್ದಾಗ ಮೇಲೆ ಹೇಳಿದ ದ್ವಿಚಕ್ರ ವಾಹನವು ನನ್ನ ಎದುರುಗಡೆಯಿಂದ ಬಂದು ನನಗೆ ಡಿಕ್ಕಿ ಹೊಡೆಯಿತು.

3. ನಾನು ಚೀಲೂರು ಕಡೆಗೆ ನಡೆದುಕೊಂಡು ಹೋಗುತ್ತಾ ಇರುವಾಗ ರಸ್ತೆಯಲ್ಲಿ ಬರುವ ವಾಹನಗಳನ್ನು ಗಮನಿಸದೇ ನಾನೇ ಏಕಾಏಕಿ ರಸ್ತೆಯನ್ನು ದಾಟಲು ಪ್ರಯತ್ನ ಮಾಡಿದ್ದೇನೆ, ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಎಂದರೆ ಸುಳ್ಳು.

4. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸುಳ್ಳು.

5. ಹೆಚ್ಚಿನ ಪರಿಹಾರವನ್ನು ಪಡೆಯಬೇಕು ಎಂಬ ದುರುದ್ದೇಶದಿಂದ ನಾನು ಎಲ್ಲಾ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

6. ಇವತ್ತಿಗೂ ಸಹಾ ನಾನು ನನ್ನ ವ್ಯವಸಾಯದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಾ ಇದ್ದೇನೆ ಎಂದರೆ ನನ್ನ ಕಾಲಿಗೆ ಏಟು ಆಗಿದೆ, ಹಾಗಾಗಿ ನನಗೆ ಕೆಲಸ ಮಾಡಲು ಸಾಧ್ಯ ಆಗುತ್ತಾ ಇಲ್ಲ.

7. ನಾನು ಈಗ ನಿಂತುಕೊಂಡು ಸಾಕ್ಷ್ಯ ನುಡಿಯುತ್ತಾ ಇದ್ದೇನೆ ಎಂದರೆ ಸರಿ. ಅದೇ ರೀತಿ ನಾನು ನಿಂತುಕೊಂಡು ವ್ಯವಸಾಯದ ಕೆಲಸ ಕಾರ್ಯಗಳನ್ನು ಮಾಡಬಹುದು ಎಂದರೆ ನನಗೆ ಅದು ಸಾಧ್ಯ ಆಗುವುದಿಲ್ಲ.

8. ನನಗೆ ಜಮೀನು ಇದೆ ಮತ್ತು ನಾನು ನನ್ನ ಜಮೀನಿನಲ್ಲಿಯೇ ಕೆಲಸ ಮಾಡುತ್ತಾ ಇದ್ದೆನು. ನನಗೆ ಸುಮಾರು 7 ರಿಂದ 8 ಎಕರೆ ಜಮೀನು ಇದೆ. ನಮ್ಮ ಜಮೀನುಗಳು ನಮ್ಮ ತಂದೆಯ ಹೆಸರಿನಲ್ಲಿಯೇ ಇದೆ.

9. ವ್ಯವಸಾಯದಲ್ಲಿ ವರ್ಷಕ್ಕೊಂದು ಬಾರಿ ನನಗೆ ಆದಾಯ ಬರುತ್ತದೆ ಎಂದರೆ ಸರಿ. ಬೆಳೆ ಚೆನ್ನಾಗಿ ಬಂದರೆ ಮಾತ್ರ ನನಗೆ ಆದಾಯ ಸಿಗುತ್ತದೆ ಎಂದರೆ ಸರಿ. ನನಗೆ ಪ್ರತಿತಿಂಗಳು ನಿಯಮಿತವಾಗಿ ವ್ಯವಸಾಯದಲ್ಲಿ ಆದಾಯ ಸಿಗುವುದಿಲ್ಲ ಎಂದರೆ ಸರಿ.

10. ನಾನು ಈ ದಿನ ಮೆಟ್ಟಿಲುಗಳನ್ನು ಹತ್ತಿಕೊಂಡು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ಇವತ್ತಿಗೂ ಸಹಾ ನಾನು ಸಣ್ಣ-ಪುಟ್ಟ ಭಾರದ ವಸ್ತುಗಳನ್ನು ಎತ್ತಿಕೊಂಡು ಓಡಾಡುತ್ತೇನೆ ಎಂದರೆ ಸುಳ್ಳು.

11. ಈ ದಿನ ನಾನು ಬೆಂಗಳೂರಿನ ಬನಶಂಕರಿಯಿಂದ ನ್ಯಾಯಾಲಯಕ್ಕೆ ಬಂದಿದ್ದೇನೆ. ನಾನು ಈ ದಿನ ಆಟೋರಿಕ್ಷಾದಲ್ಲಿ ನ್ಯಾಯಾಲಯಕ್ಕೆ ಬಂದಿದ್ದೇನೆ.

12. ಮೇಲೆ ಹೇಳಿದ ಹಾಗೆ ನಾನು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಾ ಇದ್ದಾಗ ಯಾವುದೇ ಸೂಚನೆಯನ್ನು ಕೊಡದೇ ಏಕಾಏಕಿ ರಸ್ತೆಯನ್ನು ದಾಟಲು ಪ್ರಯತ್ನ ಮಾಡಿದ್ದೇನೆ ಮತ್ತು ನನ್ನ ತಪ್ಪಿನಿಂದಲೇ ಅಪಘಾತವು ಆಗಿದೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಾದ ಶ್ರೀ ಆರ್.ಎಲ್.ಜಿ. ರವರಿಂದಃ</u>**

13. ದಿನಾಂಕ 20.10.2024 ರಂದು ಅಪಘಾತವು ಆಗಿದೆ. ಅಪಘಾತವು ಬೆಳಿಗ್ಗೆ 9 ರಿಂದ 9.30 ರ ಸಮಯದ ಮಧ್ಯದಲ್ಲಿ ಆಗಿದೆ. ಸಯ್ಯದ್ ಮೆಡಿಕಲ್ಸ್ ಎಂಬ ಅಂಗಡಿಯ ಮುಂಭಾಗದಲ್ಲಿ ಅಪಘಾತವು ಆಗಿದೆ.

14. KA-42-E-7948 ಸಂಖ್ಯೆಯ ದ್ವಿಚಕ್ರ ವಾಹನದ ಚಾಲಕನು ಅತ್ಯಂತ ಜಾಗರೂಕತೆಯಿಂದ ತನ್ನ ವಾಹನವನ್ನು ಚಾಲನೆ ಮಾಡಿಕೊಂಡು ಬರುತ್ತಾ ಇದ್ದನು ಮತ್ತು ನಾನು ಮೊಬೈಲ್ ಫೋನಿನಲ್ಲಿ ಮಾತನಾಡಿಕೊಂಡು ಏಕಾಏಕಿ ಆ ವಾಹನಕ್ಕೆ ಅಡ್ಡ ಬಂದಿದ್ದೇನೆ ಮತ್ತು ನನ್ನ ತಪ್ಪಿನಿಂದಲೇ ಅಪಘಾತವು ಆಗಿದೆ ಎಂದರೆ ಸುಳ್ಳು.

15. ನನಗೆ ಒಂದು ತಿಂಗಳಿಗೆ 20 ಸಾವಿರ ರೂಪಾಯಿ ಆದಾಯ ಇದೆ ಎನ್ನುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

16. ನಾನು ಹಾಜರುಪಡಿಸಿರುವಂತಹ ಎಲ್ಲಾ ಮೆಡಿಕಲ್ ಬಿಲ್ಲುಗಳನ್ನು ಹೆಚ್ಚಿನ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

17. ನನ್ನ ತಪ್ಪಿನಿಂದಲೇ ಅಪಘಾತವು ಆಗಿದೆ ಮತ್ತು ಆ ಕಾರಣದಿಂದ ಯಾವುದೇ ಪರಿಹಾರವನ್ನು ಪಡೆದುಕೊಳ್ಳುವಂತಹ ಅರ್ಹತೆ ನನಗೆ ಇರುವುದಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.